# ಶ್ರೀಗದಾಧರಸ್ತೋತ್ರಮ್ - ೨



ಶಿವ-ಕೇಶವ-ವಾಸವ-ಸಂಗಯುತಂ
ಅವತಾರಗರಿಷ್ಠಮರಿಷ್ಟಹೃತಮ್ ।
ಅಘಮೋಚನ-ದುಷ್ಕೃತಮುಕ್ತಿಕರಂ
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೫ ॥

ಶಿವ, ವಿಷ್ಣು, ಇಂದ್ರರುಗಳೊಂದಿಗೆ ಇರುವ, ಶತ್ರುಗಳನ್ನು ಹಾಗೂ ಅಜ್ಞಾನವನ್ನು ದೂರಮಾಡಬಲ್ಲ, ಎಲ್ಲ ಅವತಾರಗಳಲ್ಲಿ ಶ್ರೇಷ್ಠರಾದ, ಪಾಪಗಳನ್ನು ನಿವಾರಿಸಿ, ಕೆಟ್ಟ ಕರ್ಮಗಳ ಬಂಧನದಿಂದ ಬಿಡಿಸುವ ಪರಬ್ರಹ್ಮರೂಪ ಗದಾಧರನನ್ನು ನಮಸ್ಕರಿಸುತ್ತೇನೆ.

ಕರುಣಾಘನ-ಕರ್ಮಕಠೋರ-ಪಣಂ
ಗುಣಹೀನಮಪಾಪಮಶೇಷಗುಣಮ್ ।
ಯುಗಚಕ್ರವಿವರ್ತಕ-ತರ್ಕಹರಂ
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೬ ॥

ಕರುಣೆಯ ಮೂರ್ತಿಯಾದ, ಕಠೋರವಾದ ಸಾಧನಾಕ್ರಮದಿಂದ ಸ್ತೋತ್ರಗಳಿಗೆ ಪಾತ್ರರಾದ, ತ್ರಿಗುಣರಹಿತರಾದ, ಅದರಿಂದ ಪಾಪಗಳ ಸ್ಪರ್ಶವಿಲ್ಲದ, ಸಕಲ ಮಂಗಳಕರ ಗುಣಗಳನ್ನು ಹೊಂದಿದ, ಯುಗಚಕ್ರವನ್ನು ನಡೆಸುವ, ಜನರ ಒಣ ತರ್ಕವಿಚಾರಗಳನ್ನು ದೂರಮಾಡುವ ಪರಬ್ರಹ್ಮರೂಪ ಗದಾಧರನನ್ನು ನಮಸ್ಕರಿಸುತ್ತೇನೆ.

ಶುಭಬೇಲುಡಮಂದಿರಸನ್ನಿಹಿತಂ
ನಿಜಶಿಷ್ಯ-ಪ್ರಶಿಷ್ಯ-ವಿಶೇಷತರಮ್ ।
ಶಿವಮೋಕ್ಷಧನೇಶ್ವರಮಾದಿಗುರುಂ
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೭ ॥

ಪವಿತ್ರವಾದ ಬೇಲೂರು ಮಠದ ಮಂದಿರದಲ್ಲಿ ನೆಲೆಸಿರುವ, ತಮ್ಮ ಶಿಷ್ಯಪ್ರಶಿಷ್ಯಾದಿಗಳಿಗೆಲ್ಲ ಅತಿ ವಿಶಿಷ್ಟರಾದ, ಮೋಕ್ಷವೆಂಬ ಐಶ್ವರ್ಯಕ್ಕೆ ಒಡೆಯರಾದ, ಶಿವಸ್ವರೂಪಿಯಾಗಿ ಲೋಕಕ್ಕೆ ಆದಿ ಗುರುವೆನಿಸಿದ ಪರಬ್ರಹ್ಮರೂಪ ಗದಾಧರನನ್ನು ನಮಸ್ಕರಿಸುತ್ತೇನೆ.

ಸುಗಭೀರ-ಸಮಾಧಿಸಮುದ್ರಗತಂ
ಕೃತಮುಕ್ತಿವಿಕಾಸನ-ವಿಶ್ವಹಿತಮ್ ।
ತವ ನಾಮ ಶುಭಂ ಭವತಾಪಹರಂ
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೮ ॥

ಅತ್ಯಂತ ಗಂಭೀರವಾದ ಸಮಾಧಿ ಸಮುದ್ರದಲ್ಲಿ ಲೀನರಾದ, ಭಕ್ತಿಯನ್ನು ಲೋಕದಲ್ಲಿ ವಿಕಾಸಗೊಳಿಸಿ ವಿಶ್ವದ ಹಿತವನ್ನು ಸಾಧಿಸಿದ, ಸಂಸಾರದ ತಾಪವನ್ನೆಲ್ಲ ನೀಗುವ ಪವಿತ್ರ ನಾಮವುಳ್ಳ ಪರಬ್ರಹ್ಮರೂಪ ಗದಾಧರನನ್ನು ನಮಸ್ಕರಿಸುತ್ತೇನೆ.

— ಶರಚ್ಚಂದ್ರ ಚಕ್ರವರ್ತಿ

## ಸೂಕ್ತಿಪ್ರಭ

ಶಾಂತಾ ಮಹಾಂತೋ ನಿವಸಂತಿ ಸಂತೋ
ವಸಂತವಲ್ಲೋಕಹಿತಂ ಚರಂತಃ ।
ತೀರ್ಣಾಃ ಸ್ವಯಂ ಭೀಮಭವಾರ್ಣವಂ ಜನಾನ್
ಅಹೇತುನಾಽನ್ಯಾನಪಿ ತಾರಯಂತಃ ॥

ಭಯಂಕರವಾದ ಸಂಸಾರಸಾಗರವನ್ನು ತಾವು ದಾಟಿ, ಯಾವ ನಿಮಿತ್ತವೂ ಇಲ್ಲದೆ ಇತರ ಜನರನ್ನು ದಾಟಿಸುವ ಶಾಂತರೂ ಮಹನೀಯರೂ ಆದ ಸತ್ಪುರುಷರು ವಸಂತ ಋತುವಿನಂತೆ ಲೋಕಕಲ್ಯಾಣವನ್ನು ಮಾಡುತ್ತಾ ಇರುತ್ತಾರೆ.

— ಶಂಕರಾಚಾರ್ಯ

## ವಸಂತ ಸೂಕ್ತಿಗಳು

ಚಳಿಗಾಲ ಬಂದ ಮೇಲೆ, ಇನ್ನೇನು ವಸಂತನು ಸುಮ್ಮನೆ ಹಿಂದೆ ಉಳಿಯುವನೆ?

—ಪಿ. ಬಿ. ಶೆಲ್ಲಿ

ಅನುಕಂಪದ ಒಂದೇ ಒಂದು ಮಾತು, ವಸಂತದ ಹಗಲಿನಂತೆ.

—ರಷ್ಯನ್ ಗಾದೆ

ಈ ಜಗತ್ತಿನಲ್ಲಿ ಅತ್ಯುತ್ತಮ ಸಂಗತಿ ಏನೆಂದರೆ, ಇಲ್ಲಿ ಯಾವಾಗಲೂ ವಸಂತಕಾಲ ಬಂದೇ ಬರುತ್ತದೆ ಎಂಬುದು.

— ಎಲ್. ಎಂ. ಮೊಂಟ್‌ಗೋಮೆರಿ